**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ 173/2025**

| | | |
|---|---|---|
| ಸಾಕ್ಷಿದಾರರ ಹೆಸರು | ಚರಣ್ ಗೌಡ | ಪ್ರಮಾಣ ಮಾಡಿದ ದಿನಾಂಕಃ 15.06.2026 |
| ತಂದೆ ಹೆಸರು | ಮಲ್ಲಪ್ಪ ಗೌಡ | |
| ವಯಸ್ಸು | 29 ವರ್ಷ | |
| ವೃತ್ತಿ | ಪಿ.ಎಸ್.ಐ | ಚಾಸಾ: 11 |
| ವಾಸಸ್ಥಳ | ಚನ್ನರಾಯಪಟ್ಟಣ | ಫ್ರಾಸಾ: 07 |

**ದಿನಾಂಕಃ** 15.06.2026 **ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ**

ದಿಃ 20.06.2023 ರಿಂದ 27.06.2025 ರವರೆಗೆ ಬೇಗೂರು ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 16.12.2024 ರಂದು ಪ್ರಕರಣದ ತನಿಖೆ ಕಡತವನ್ನು ಚಾಸಾ–10 ರವರಿಂದ ಪಡೆದು ತನಿಖೆ ಮುಂದುವರೆಸಿ, ಅದೇ ದಿನ ಸಾಕ್ಷಿದಾರರಾದ ಚಾಸಾ–3 ಮತ್ತು 4 ರವರನ್ನು ವಿಚಾರಣೆ ಮಾಡಿ, ಹೇಳಿಕೆ ಪಡೆದು ಸದರಿ ಹೇಳಿಕೆಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ತನಿಖೆ ಮುಂದುವರೆಸಿ ದಿಃ 08.01.2025 ರಂದು ಆರೋಪಿಗಳು ಘನ ನ್ಯಾಯಾಲಯದಿಂದ ಜಾಮೀನು ಪಡೆದು, ಠಾಣೆಗೆ ಹಾಜರಾದ ಮೇರೆಗೆ ಸದರಿ ಆರೋಪಿಗಳ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ಸೂಕ್ತ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ನಂತರ ತನಿಖೆ ಮುಂದುವರೆಸಿ ದಿಃ 23.03.2025 ರಂದು ಚಾಸಾ–1 ರವರ ವಿಚಾರಣೆ ಮಾಡಿ ಮರು ಹೇಳಿಕೆ ಪಡೆದಿರುತ್ತೇನೆ. ದಿಃ 28.01.2025 ಮತ್ತು ದಿಃ 01.05.2026 ರಂ ದು ಚಾಸಾ–1 ಮತ್ತು 2 ರವರ ಗಾಯದ ಪ್ರಮಾಣ ಪತ್ರವನ್ನು ಚಾಸಾ–7 ರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 12.04.2025 ರಂದು ಕೃತ್ಯಕ್ಕೆ ಬಳಸಿದ ದೊಣ್ಣೆಯನ್ನು ಚಾಸಾ–

7 ರವರ ಮುಂದೆ ಹಾಜರುಪಡಿಸಿದು, ಅವರ ಅಭಿಪ್ರಾಯ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ 21.03.2025 ರಂದು ಚಾಸಾ–1 ರವರ ಹೇಳಿಕೆಯನ್ನು ಘನ ನ್ಯಾಯಾಲಯದಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 01.05.2025 ರಂದು ಆರೋಪಿತರ ಮೇಲೆ ಆರೋಪ ಸಾಭಿತಾದ ಕಾರಣ ದೋಷಾರೋಪಣೆ ಪಟ್ಟಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿಯು ನಿಪಿ8 ರಿಂದ 10 ರಲ್ಲಿ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ8(ಬಿ), ನಿಪಿ9(ಬಿ) ಮತ್ತು ನಿಪಿ10(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದಃ</u>**

ದಿಃ 16.12.2024 ರಂದು ಚಾಸಾ–3 ಮತ್ತು 4 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ–3 ಮತ್ತು 4 ರವರಿಗೆ ನಾನು ನೋಟೀಸ್ ನೀಡಿರುವುದಿಲ್ಲ. ಅಂದು ಚಾಸಾ–3 ಮತ್ತು 4 ರವರು ಠಾಣೆಗೆ ಬಂದಿದ್ದರು. ಇದೇ ಪ್ರಕರಣದ ಸಂಬಂಧ ಅವರು ಠಾಣೆಗೆ ಬಂದಿದ್ದರು. ಅವರು ಯಾರ ಸಂಗಡ ಬಂದಿದ್ದರು ಎಂದು ಗೊತ್ತಿಲ್ಲ. ಚಾಸಾ–1 ಮತ್ತು 2 ರವರಿಗೆ ಅನುಕೂಲವಾಗಲಿ ಎಂದು ನಿಪಿ8 ಮತ್ತು 9 ನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ಚಾಸಾ–1 ರವರ ಚಿನ್ನದ ಸರ ಮೊದಲು ಎಲ್ಲಿ ಇತ್ತು ಎಂದು ನಾನು ತನಿಖೆ ಮಾಡಿಲ್ಲ. ಸದರಿ ಚಿನ್ನದ ಸರದ ಬಗ್ಗೆ ತನಿಖೆ ಮಾಡಲಾಗಿ ಅದು ಸಿಕ್ಕಿದೆ ಎಂದು ಚಾಸಾ–1 ರವರು ತಿಳಿಸಿದರು. ದಿಃ 16.12.2024 ರಂದು ಸಾಕ್ಷಿದಾರರ ಹೇಳಿಕೆಯನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ದಿಃ 23.03.2025 ರಂದು ಚಾಸಾ–1 ರವರ ಮರು ಹೇಳಿಕೆ ಪಡೆದಿದ್ದೇನೆ ಎಂದರೆ ಸರಿ. ಆರೋಪಿಗಳು ಯಾವುದೆ ಗಲಾಟೆ ಮಾಡಿಲ್ಲ ಮತ್ತು ಚಾಸಾ–1 ರವರ ಚಿನ್ನದ ಸರವನ್ನು ಕಸಿದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ–10 ಮು.ಮಾ.1 ನ್ನು ಹಾಜರುಪಡಿಸಿದರು.

ಮು.ಮಾ.1 ನ್ನು ನಾನು ವೈದ್ಯರ ಸಮಕ್ಷಮ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ–1 ಮತ್ತು 2 ರವರಿಗೆ ಹಲ್ಲೆ ಮಾಡಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಯಾವುದೆ ತನಿಖೆ ಮಾಡದೆ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಸುಳ್ಳು

ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ, ಮುದ್ದೆಮಾಲಿಗೂ ಮತ್ತು ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ